ಇ) ಸದ್ರಿ ಅಗ್ಮೆದಾರರ ಕುರಿತು ಹಿಂದುಳಿದವರ ಸಂಖ್ಯೆ ಎಷ್ಟು ; ಹರಿಜನ-ಗಿರಿಜನರ ಸಂಖ್ಯೆ ಎಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ(ಕಂದಾಯ, ಯೋಜನಾ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು). —

ಅ) ೪೭೬೬ ಪ್ರಕರಣಗಳು ಮತ್ತು ೭೫೬೮-೦೧ ಎಕರೆ ವಿಸ್ತೀರ್ಣ

ಆ) ೧೫೧೮ ಪ್ರಕರಣಗಳು ರಿಕಾರ್ಡು ತಯಾರಿಸಿರುವುದು ೩೨೪೮ ಪ್ರಕರಣಗಳಲ್ಲಿ ಬಾಕಿ ರಿಕಾರ್ಡು ತಯಾರಿಸಲು ಇರುವುವು ಇವುಗಳು ಇತ್ತೀಚಿನ ಅಕ್ರಮಣಗಳಾಗಿರುತ್ತದೆ.

ಇ) ಹಿಂದುಳಿದವರ ಸಂಖ್ಯೆ ೨೫೪೦
ಹರಿಜನ ಗಿರಿಜನರಸಂಖ್ಯೆ ೮೫೦

ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯ ನೌಕರರ ಸಂಘದ ಮಾನ್ಯತೆ

೧೩೦೨.- ಶ್ರೀ ಟಿ. ಎಸ್. ಮಣಿ (ಕೆ ಜಿ. ಎಫ್) —ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ನೌಕರರದಲ್ಲಿ ೪೦೦೦ ನೌಕರರು ಸಂಘದಲ್ಲಿದ್ದಾಗ್ಯೂ ಸಹ ಅದಕ್ಕೆ ಮಾನ್ಯತೆ ನೀಡದಿರಲು ಕಾರಣಗಳೇನು ?

ಆ) ನೌಕರರು ಟ್ರೇಡ್ ಯೂನಿಯನ್ ಹಕ್ಕುಗಳಿಂದ ವಂಚಿತರಾಗುವುದಿಲ್ಲವೇ ?

ಶ್ರೀ ಎಸ್. ಕೆ. ಕಾಂತಾ(ಕಾರ್ಮಿಕ ಸಚಿವರು). —

ಅ) ಮಾಲೀಕರಿಂದ ಟ್ರೇಡ್ ಯೂನಿಯನ್ನುಗಳಿಗೆ ಕಾರ್ಮಿಕ ಕಾನೂನು ಅನ್ವಯ ಕಡ್ಡಾಯವಾಗಿ ಮಾನ್ಯತೆ ನೀಡುವ ಯಾವುದೇ ಅವಕಾಶವಿರುವುದಿಲ್ಲ.

ಆ) ಉದ್ಯಮದಲ್ಲಿ ಸೌಹಾರ್ದತೆ ಕಾಪಾಡಲು ಮತ್ತು ನೌಕರರ ಟ್ರೇಡ್ ಯೂನಿಯನ್ ಹಕ್ಕುಗಳನ್ನು ಸಂರಕ್ಷಿಸಲು ಟ್ರೇಡ್ ಯೂನಿಯನ್‌ಗೆ ಮಾನ್ಯತೆ ನೀಡುವುದು ಒಳ್ಳೆಯದು.

ತುಂಗಭದ್ರ ಸಕ್ಕರೆ ಕಾರ್ಖಾನೆಗೆ ಗುತ್ತಿಗೆಯಂ ಮೇರೆಗೆ ಭೂ ಮಂಜೂರಾತಿ ಮಾಡುವುದು

೧೩೮೦. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಕಂದಾಯ ಯೋಜನಾ ಹಾಗೂ ಭಾರಿ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ಜಿಲ್ಲೆಯ ತುಂಗಭದ್ರಾ ಸಕ್ಕರೆ ಕಾರ್ಖಾನೆಗೆ ಸರ್ಕಾರದಿಂದ ೩೦ ವರ್ಷ ಹಿಂದೆ ಗುತ್ತಿಗೆ ಆಧಾರದ ಮೇಲೆ ೩—೪ ಸಾವಿರ ಎಕರೆ ಜಮೀನನ್ನು ಕೊಟ್ಟಿದ್ದು ನಿಜವೆ ;

ಆ) ಗುತ್ತಿಗೆ ಅವಧಿಯಲ್ಲಿ ವ್ಯವಸಾಯ ಮಾಡದೆ ನೂರಾರು ಎಕರೆ ಜಮೀನಂ ಪಾಳು ಬಿದ್ದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಇ) ಸದರಿ ಕಾರ್ಖಾನೆಯವರು ರೈತರಂ ಬೆಳೆಯುವ ಕಬ್ಬನ್ನೇ ಅರೆಯಲು ಸಾಧ್ಯವಾಗುತ್ತಿಲ್ಲದಿರುವುದು ನಿಜವೆ ;

ಈ) ಹಾಗಿದ್ದಲ್ಲಿ. ಸಕ್ಕರೆ ಕಾರ್ಖಾನೆಗೆ ಗುತ್ತಿಗೆ ನೀಡಿರುವ ಜಮೀನಿನಲ್ಲಿ ಕಬ್ಬನ್ನು ಬೆಳೆಯಲು ಭೂರಹಿತ ಕೃಷಿ ಕಾರ್ಮಿಕರಿಗೇ ಪಹಿಸಿಕೊಡಲು ಸರ್ಕಾರವು ಕಾರ್ಖಾನೆಯವರಿಗೆ ಆದೇಶ ನೀಡುವರೆ ?

ಶ್ರೀ ಎಸ್. ಆರ್. ಬೊಮ್ಮಾಯಿ(ಕಂದಾಯ, ಯೋಜನಾ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಈ ಪೈಕಿ ಕೆಲವೊಂದು ಭಾಗಗಳಲ್ಲಿ ಕೃಷಿಗೆ ಯೋಗ್ಯವಲ್ಲದ ಜಮೀನುಗಳಿದ್ದು, ಅವುಗಳಲ್ಲಿ ವ್ಯವಸಾಯ ಮಾಡಿರುವುದಿಲ್ಲ.

ಇ) ಇಲ್ಲಾ

ಈ) ಕಾರ್ಖಾನೆಯವರಿಗೆ ಆದೇಶ ಕೊಡಲು ಬರುವುದಿಲ್ಲ. ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಸೂಕ್ತ ನಿರ್ದೇಶನ ಕೊಡಲಾಗಿದೆ.

ಹಿಂದುಳಿದ ವರ್ಗದವರ ವಿದ್ಯಾರ್ಥಿನಿಲಯಗಳು

೧೫೭೮. ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಹಿಂದುಳಿದ ಪಂಗಡಕ್ಕೆ ಸೇರಿದ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು) ವಿವರ ಕೊಡುವುದು.

ಆ) ೧೯೮೮-೮೯ನೇ ಸಾಲಿನಲ್ಲಿ ಈ ರೀತಿಯ ಎಷ್ಟು ನಿಲಯಗಳನ್ನು ಎಲ್ಲೆಲ್ಲಿ ತೆರೆಯಲು ಉದ್ದೇಶಿಸಲಾಗಿದೆ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಹಿಂದುಳಿದ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ ವಿದ್ಯಾರ್ಥಿನಿಲಯಗಳು ಇರುವುದಿಲ್ಲ. ಈ ವಿದ್ಯಾರ್ಥಿಗಳಿಗೆ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ನಿಲಯಗಳಿಂದು ಹೆಸರಿಸಿ ಹಿಂದುಳಿದ ಪಂಗಡದ ವಿದ್ಯಾರ್ಥಿಗಳಿಗೂ ಸಹ ನಿಲಯದಲ್ಲಿ ಅವಕಾಶ ಮಾಡಿಕೊಡಲಾಗಿದೆ. ವಿದ್ಯಾರ್ಥಿನಿಲಯಗಳ ಸಂಖ್ಯೆ. ೯೪೭. (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ)

ಆ) ಹಿಂದುಳಿದ ಪಂಗಡದ ವಿದ್ಯಾರ್ಥಿನಿಲಗಳಿಗಾಗಿಯೇ ಪ್ರತ್ಯೇಕ ವಿದ್ಯಾರ್ಥಿನಿಲಯಗಳನ್ನು ತೆರೆಯಲು ಅವಕಾಶವಿರುವುದಿಲ್ಲ. ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ವಿದ್ಯಾರ್ಥಿನಿಲಯಗಳಲ್ಲಿ ಹಿಂದುಳಿದ ಪಂಗಡದ ವಿದ್ಯಾರ್ಥಿಗಳಿಗೂ ಸಹ ನಿಲಯಗಳಲ್ಲಿ ಅವಕಾಶವಿರುತ್ತದೆ. ೧೯೮೮-೮೯ನೇ ಸಾಲಿಗೆ ೮೬ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಇದೆ. ಎಲ್ಲೆಲ್ಲಿ ತೆರೆಯಬೇಕೆಂಬ ಮಾಹಿತಿಯನ್ನು ಜಿಲ್ಲಾ ಪರಿಷತ್‌ನಿಂದ ಪಡೆದ ನಂತರ ತೀರ್ಮಾನ ತೆಗೆದುಕೊಳ್ಳಲಾಗುವುದು.